For more job news visit : www.kpscvaani.com

ಕರ್ನಾಟಕ ಸರಕಾರ

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ, ಯಾದಗಿರಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ವಿ.ಬಿ.ಡಿ.ಸಿ. ಅಧಿಕಾರಿಗಳ ಕಛೇರಿ, ಯಾದಗಿರಿ.

ಡಿ.ಹೆಚ್.ಓ ಕಛೇರಿ ಆವರಣ ಸಪ್ನಾ ಗ್ರೌಂಡ್ ಹತ್ತಿರ ಯಾದಗಿರಿ.-585201. Email-dmoyadgiri2@gmail.com

No.DVBDCO/Y/26/2025-26

Date:28.05.2025

## ಪತ್ರಿಕಾ ಪ್ರಕಟಣೆ

01. ಮಾನ್ಯ ಅಭಿಯಾನ ನಿರ್ದೇಶಕರು, ಎನ್.ಹೆಚ್.ಎಂ ಆರೋಗ್ಯ ಮತ್ತು ಕು.ಕ.ಸೇ.ನಿ ಬೆಂಗಳೂರು ಇವರ ಕಛೇರಿ ಪತ್ರ ಸಂ:ಎನ್‌ವಿಬಿಡಿಸಿಪಿ/ಇಎನ್‌ಟಿ-7/2025-26 ದಿನಾಂಕ:16.05.2025ರನ್ವಯ ಕೀಟಜನ್ಯ ರೋಗಗಳ ರೋಗವಾಹಕಗಳ ಸಂಗ್ರಹಣೆಗಾಗಿ ಕೀಟ ಸಂಗ್ರಾಹಕ ಒಂದು ಹುದ್ದೆಗಾಗಿ 1 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸೂಕ್ತ ಹಾಗೂ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. (ಮಾಸಿಕ ವೇತನ ರೂ.15114/-) ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಸಭಾಂಗಣದಲ್ಲಿ ದಿನಾಂಕ:09.06.2025ರ ಬೆಳಿಗ್ಗೆ 10:00 ಗಂಟ್ಟೆಯಿಂದ ಮಧ್ಯಾಹ್ನ 05:00 ರೊಳಗಾಗಿ ನೇರ ಸಂದರ್ಶನದ (Walk In Interview) ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು.

| ಹುದ್ದೆಯ ಹೆಸರು | ಹುದ್ದೆ ಸಂಖ್ಯೆ | ವಿದ್ಯಾರ್ಹತೆ | ವಯೋಮಿತಿ | ಆಯ್ಕೆಯ ವಿಧಾನ |
|---|---|---|---|---|
| ಕೀಟ ಸಂಗ್ರಾಹಕ (Insect Collector) | 01 | ದ್ವಿತಿಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣ ಹೊಂದಿರಬೇಕು | ನೇರ ಸಂದರ್ಶನದ ಸಮಯದಲ್ಲಿ ಅಭ್ಯರ್ಥಿಯ 40 ವರ್ಷ ಮೀರಿರಬಾರದು | ಮೆರಿಟ್ ಆಧಾರದ ಮೇಲೆ |

**ಕೀಟ ಸಂಗ್ರಾಹಕ ಹುದ್ದೆಯ ಕರ್ತವ್ಯಗಳು, ನಿಬಂಧನೆಗಳು:**

1. ನಗರ/ಗ್ರಾಮೀಣ ಪ್ರದೇಶಗಳಲ್ಲಿ ಸೊಳ್ಳೆ/ಕೀಟಗಳ ಸಂಗ್ರಹಣೆಗಾಗಿ ಮುಂಜಾನೆ 05:00 ಗಂಟೆ ಹಾಗೂ ರಾತ್ರಿ 08:00ರ ಸಮಯದಲ್ಲಿ ಕಾರ್ಯನಿರ್ವಹಿಸುವುದು, ಸಂದರ್ಭಕ್ಕೆ ಅನುಸಾರವಾಗಿ ವಾಸ್ತವ್ಯವಾಗಿರಬೇಕು.
2. ತಿಂಗಳಲ್ಲಿ ಕನಿಷ್ಠ 16ದಿನ ಪ್ರವಾಸ ಮಾಡುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯಲ್ಲಿ ಪಡೆಯಬಹುದಾಗಿದೆ.
3. ಗಣಕಯಂತ್ರ ನಿರ್ವಹಣೆಯ ಜ್ಞಾನ ಹೊಂದಿರಬೇಕು.
4. ಸದರಿ ಹುದ್ದೆಯು ಗುತ್ತಿಗೆ ಅವಧಿಗೆ ಸೀಮಿತವಾಗಿದ್ದು ಖಾಯಂ ಎಂದು ಪರಿಗಣಿಸುವುದಿಲ್ಲ.
5. ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.

02. ಎನ್‌ವಿಬಿಡಿಸಿಪಿ ಕಾರ್ಯಕ್ರಮದಡಿಯಲ್ಲಿ ಡೆಂಗ್ಯೂ ಜ್ವರ ನಿಯಂತ್ರಣ ಈಡಿಸ್ ಲಾರ್ವಾ ಉತ್ಪತ್ತಿ ತಾಣನಾಶ ಚಟುವಟಿಕೆಗೆ 20ಜನ ಸ್ವಯಂಸೇವಕರು (ಯಾದಗಿರಿ 10, ಶೋರಾಪೂರ 05, ಶಹಾಪೂರ 05.) ಹುದ್ದೆಗಾಗಿ 100ದಿನಗಳ ಅವಧಿಗೆ ಸೂಕ್ತ ಹಾಗೂ ಸ್ಥಳೀಯ ಅಭ್ಯರ್ಥಿಗಳಿಗೆ ನೇರ ಸಂದರ್ಶವನ್ನು ಕರೆಯಲಾಗಿದ್ದು ಆಸಕ್ತಿಉಳ್ಳವ ಅಭ್ಯರ್ಥಿಗಳು (ಪ್ರತಿ ದಿನ ಗೌರವಧನ 400/-) ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಸಭಾಂಗಣದಲ್ಲಿ ದಿನಾಂಕ:04.06.2025ರ ಬೆಳಿಗ್ಗೆ 10:00 ಗಂಟ್ಟೆಯಿಂದ ಮಧ್ಯಾಹ್ನ 05:00 ರೊಳಗಾಗಿ ನೇರ ಸಂದರ್ಶನದ (Walk In Interview) ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು.

**ಸ್ವಯಂಸೇವಕರು ಹುದ್ದೆಯ ಕರ್ತವ್ಯಗಳು, ನಿಬಂಧನೆಗಳು:**

1. ಕನಿಷ್ಠ ಎಸ್.ಎಸ್.ಎಲ್.ಸಿ ಮಟ್ಟದ ವಿದ್ಯಾರ್ಹತೆಯನ್ನು ಹೊಂದಿರಬೇಕು ಹಾಗೂ ಸದರಿ ಚಟುವಟಿಕೆಯ ನಮೂನೆಯನ್ನು ಭರ್ತಿಮಾಡಲು ಶಕ್ತರಾಗಿರಬೇಕು.
2. ದಿನ ಒಂದಕ್ಕೆ ಕನಿಷ್ಠ 60-65 ಆವರಣಗಳು (Premises) ಅಂದರೆ, ಮನೆಗಳು, ಕಛೇರಿ, ಆಸ್ಪತ್ರೆ, ಶಾಲಾ - ಕಾಲೇಜು, ವಾಣಿಜ್ಯ ಸಂಕೀರ್ಣಗಳು, ಸಿನೆಮಾ ಹಾಲ್ ಹಾಗೂ ಇತ್ಯಾದಿಗಳಲ್ಲಿ ಈಡಿಸ್ ಲಾರ್ವಾ ಉತ್ಪತ್ತಿ ತಾಣನಾಶ ಚಟುವಟಿಕೆಯನ್ನು ಕೈಗೊಳ್ಳಬೇಕು.
3. ದೈನಂದಿನ ಹಾಜರಿ, ಚಟುವಟಿಕೆಯ ಸಂದರ್ಭದ (Geo Tagged Pictures) ಹಾಗೂ ನಿಗದಿತ ವರದಿಗಳನ್ನು ಸಂಬಂಧಪಟ್ಟವರಿಗೆ ಸಲ್ಲಿಸಬೇಕು.
4. ಸದರಿ ಹುದ್ದೆಯು ಖಾಯಂ / ಗುತ್ತಿಗೆ ನೌಕರಿಯಂದು ಎಂದು ಪರಿಗಣಿಸುವುದಿಲ್ಲ.
5. ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.

ಸದಸ್ಯ ಕಾರ್ಯದರ್ಶಿ
ಹಾಗೂ ಜಿಲ್ಲಾ ವಿ.ಬಿ.ಡಿ.ಸಿ ಅಧಿಕಾರಿಗಳು,
ಯಾದಗಿರಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು ಯಾದಗಿರಿ.